

# ಮುಚ್ಚಿದ ಮನೆಯೊಳಗಿನ ಬಿಚ್ಚುಜಗತ್ತು!

**ಮುಕ್ತಲೈಂಗಿಕತೆಯನ್ನೇ ವಸ್ತುವಾಗಿಸಿಕೊಂಡಿರುವ ಈ ಕಿರುಚಿತ್ರ, ವೈಯಕ್ತಿಕ ನೋವು ಮತ್ತು ಕೀಳರಿಮೆಯನ್ನು ದಾಟಿಕೊಳ್ಳಲು ಲೈಂಗಿಕತೆಯ ದೋಣಿಯೇರುವ ವ್ಯಕ್ತಿಯೊಬ್ಬನ ಬದುಕಿನಲ್ಲಿ ನಡೆಯುವ ಸನ್ನಿವೇಶಗಳನ್ನು ಚಿತ್ರಿಸುತ್ತದೆ.**

**■ ಗೌರಿ**

ಲೈಂಗಿಕತೆ ಎನ್ನುವುದು ನಮ್ಮ ಸಮಾಜದಲ್ಲಿ ಯಾವತ್ತೂ ಮುಚ್ಚಿಟ್ಟಿರುವ ಸಂಗತಿಯೇ. ಸಾರ್ವಜನಿಕವಾಗಿ ಅದರ ಬಗ್ಗೆ ಮಾತಾಡುವುದು, ಚರ್ಚಿಸುವುದು ಎಲ್ಲವೂ ಅಶ್ಲೀಲ ಎಂಬ ಭಾವನೆಯೇ ಇದೆ. ಇನ್ನೊಂದು ತುದಿಯಲ್ಲಿ ಈ ಮುಚ್ಚಿಟ್ಟ ಸಂಗತಿಯ ಬಗ್ಗೆ ಬೆಳೆದಿರುವ ಕೀಳುಮಟ್ಟದ ಹಾಸ್ಯದ ದೊಡ್ಡ ರಾಶಿಯೂ ಇದೆ. ಈ ಎರಡೂ ಅತಿಶಯಗಳ ನಡುವೆಯೇ ಎಲ್ಲೋ ಸ್ವಸ್ಥವಾದ ಬದುಕಿನ ಬಿಂದು ಇರುವಂತಿದೆ.

ಮುಚ್ಚಿಟ್ಟ ಲೈಂಗಿಕ ಜಗತ್ತಿನ ಕುರಿತು ಹುಟ್ಟುವ ಹಾಸ್ಯಕ್ಕೆ ಪೂರ್ತಿ ವಿರುದ್ಧವಾದ ಜಗತ್ತು 'ದ ಆರ್ಗಿ' ಕಿರುಚಿತ್ರದಲ್ಲಿದೆ. ಅದೊಂದು ಖುಲ್ಲಂ ಖುಲ್ಲಾ ಜಗತ್ತು. ಅದರ ಒಳಗೆ ಪ್ರವೇಶಿಸಿದರೆ ಬೆತ್ತಲ ದೇಹಗಳೇ ಕಾಣುತ್ತವೆ. ಆ ಜಗತ್ತಿನೊಳಗೆ ಸೆಕ್ಸ್ ಎನ್ನುವುದು ಖಾಸಗಿ ಸಂಗತಿ ಅಲ್ಲವೇ ಅಲ್ಲ. ತೆರೆದ ಜಾಗದಲ್ಲಿ ಗಂಡು ಹೆಣ್ಣುಗಳು ಸೇರುವುದೇ ಒಂದು ಸಂಭ್ರಮವೆನ್ನುವಂತೆ ಆ ಜಗತ್ತಿದೆ. ಇಂಥ ಮನೆಗೆ ಹೆಂಡತಿಯಿಂದ ಬೇರ್ಪಟ್ಟ ನಾಯಕ ಬರುತ್ತಾನೆ. ತನ್ನ ಭಗ್ನಪ್ರೇಮವನ್ನು ದಾಟಿಕೊಳ್ಳುವ ದಾರಿಯಾಗಿ ಅವನು ಇಲ್ಲಿಗೆ ಬಂದಿದ್ದಾನೆ. ಆದರೆ ಪೀಚುದೇಹದ, ಕೀಳರಿಮೆಯ ಅವನಿಗೆ ಈ ಜಗತ್ತಲ್ಲಿ ತನ್ನನ್ನು ತಾನು ತೆರೆದುಕೊಳ್ಳುವುದೇ ಸಾಧ್ಯವಾಗುವುದಿಲ್ಲ. ಆ ಸಂದರ್ಭದಲ್ಲಿ ಹುಟ್ಟುವ ಹಾಸ್ಯ ಮತ್ತು ಅವನ ಮನಸ್ಸಿನಲ್ಲಾಗುವ ಬದಲಾವಣೆಗಳನ್ನು ಈ ಕಿರುಚಿತ್ರ ತೋರಿಸುತ್ತದೆ.

ಪೂರ್ತಿ ಅನಾಮಿಕವಾಗಿರುವ ನಾಯಕನಿಗೆ ಆ ಮನೆಯಲ್ಲಿ ಒಬ್ಬಳು ಹುಡುಗಿ ಸಿಗುತ್ತಾಳೆ. ಅವರಿಬ್ಬರೂ ಸೋಷಿಯಲ್ ಮೀಡಿಯಾದಲ್ಲಿ ಪರಸ್ಪರ ಪರಿಚಿತರು ಎಂಬುದೂ ತಿಳಿಯುತ್ತದೆ.



**ಹೆಸರು:** ದ ಆರ್ಗಿ

**ನಿರ್ದೇಶನ:** ಸ್ಯಾಮ್ ಬರೋನ್

**ನಿರ್ಮಾಣ:** ಟಿಲ್ಲಿ, ಕೌಲ್ಸನ್, ಡೇವ್ ಬೀರ್ಝ್‌ಲೇ

**ತಾರಾಗಣ:** ಅಮಿತ್ ಶಾ, ಅಲೆಕ್ಸಾಂಡರ್ ರೋಚ್, ಡಸ್ಟಿನ್ ಡೆಮ್ರಿ ಬರ್ನ್ಸ್

**ಹಿನ್ನೆಲೆ ಸಂಗೀತ:** ರೋಲಿ ವಿಥೆರೋ

**ಛಾಯಾಗ್ರಹಣ:** ಕ್ಯಾಥರಿನ್ ಗೋಲ್ಡ್‌ಸ್ಮಿತ್

ಅವನ ಕೀಳರಿಮೆಯನ್ನು, ಮನಸ್ಸಿನ ದುಗುಡವನ್ನು ಕಳೆದು ಅವಳು ಅವನಿಗೆ ಪ್ರೇಮದ ಪಾಠವನ್ನು ಹೇಳಿಕೊಡುತ್ತಾಳೆ.

ಹಾಸ್ಯವೇ ಈ ಕಿರುಚಿತ್ರದ ಉದ್ದೇಶವಾಗಿದ್ದರೂ, ಇಡೀ ಚಿತ್ರ ನಡೆಯುವುದು ಮುಕ್ತಲೈಂಗಿಕತೆಯ ವಾತಾವರಣದಲ್ಲಿ ಆಗಿದ್ದರೂ, ಬೆತ್ತಲು ಎನ್ನುವುದನ್ನು ಕೀಳು ಹಾಸ್ಯದ ಸಲಕರಣೆಯಾಗಿ ನಿರ್ದೇಶಕರು ಬಳಸಿಕೊಂಡಿಲ್ಲ ಎನ್ನುವುದು ಗಮನಾರ್ಹ. ಇಲ್ಲಿ ಹಾಸ್ಯ ಇರುವುದು ಸನ್ನಿವೇಶಗಳಲ್ಲಿ, ಪಾತ್ರಗಳ ನಡತೆಯಲ್ಲಿ, ಮಾತಿನ ಹರಿತಗುಣದಲ್ಲಿ. ಹಾಸ್ಯದ ಜೊತೆಗೆ ಇನ್ನೂ ಕೆಲವು ಗಮನಿಸಲೇಬೇಕಾದ ಸಂಗತಿಗಳನ್ನೂ ಅವರು ಒಳಗೊಂಡಿದ್ದಾರೆ. ಈ ಜಾಗದಲ್ಲಿ ನಾಯಕನಿಗೆ ಸಿಗುವ ಹೆಣ್ಣಿಗೆ ಮಗಳೂ ಇದ್ದಾಳೆ. ಅದನ್ನು ಅವಳು ತುಂಬ ಸಹಜ ಎನ್ನುವಂತೆ ಹೇಳಿಕೊಳ್ಳುತ್ತಾಳೆ.

ಆದರೆ ಇಲ್ಲಿ ಕೀಳರಿಮೆ ಇರುವ, ಸೆಕ್ಸ್‌ನ ಬಗ್ಗೆ ಸಾಂಪ್ರದಾಯಿಕ ಮನೋಭಾವ ಇರುವ ನಾಯಕನ ಪಾತ್ರವನ್ನು ಒಬ್ಬ ಭಾರತೀಯ ನಟನಿಂದ ಮಾಡಿಸಿದ್ದರ ಹಿಂದಿನ ಉದ್ದೇಶವನ್ನೂ ಗಮನಿಸಲೇಬೇಕು. ಭಾರತದಲ್ಲಿ ಲೈಂಗಿಕತೆಯ ಬಗ್ಗೆ ಅತಿ ಸಾಂಪ್ರದಾಯಿಕತೆ ಇದೆ ಎನ್ನುವುದು ನಿಜವೇ. ಆದರೆ ಇಲ್ಲಿ ಲೈಂಗಿಕತೆಯ ಬಗ್ಗೆ ಮೊದಲಿನಿಂದಲೂ ಸಾಕಷ್ಟು ಚರ್ಚೆಗಳೂ ನಡೆದಿವೆ ಎನ್ನುವುದನ್ನೂ ಮರೆಯುವಂತಿಲ್ಲ. ಮುಕ್ತ ಲೈಂಗಿಕತೆ ಎನ್ನುವುದು ವೈಯಕ್ತಿಕ ಆಯ್ಕೆ ಅಂತಾದರೆ ಅದರ ಖಾಸಗೀತನವೂ ಒಂದು ಆಯ್ಕೆಯೇ ಆಗಿರುತ್ತದೆ. ಅವೆರಡರ ಪರಿಣಾಮ ಮತ್ತು ವಿವೇಕಗಳ ಬಗ್ಗೆ ನಾವು ಚರ್ಚಿಸಬಹುದೇ ಹೊರತು ಒಂದರ ಪಕ್ಕ ಇನ್ನೊಂದಿಟ್ಟು ತೂಕ ಮಾಡಲು ಹೊರಡುವುದು ಅವಿವೇಕವೇ ಆಗುತ್ತದೆ. ಇಂಥ ಅವಿವೇಕದ ಸಣ್ಣ ಎಳೆ ಈ ಕಿರುಚಿತ್ರದ ನಿರ್ದೇಶಕರ ಮನಸಲ್ಲಿಯೂ ಇರುವಂತಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3iIElfZ ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.